These three projects are huge projects, especially the Upper Krishna Project, it has therefore been impressed upon the Central Government that such large projects should be taken up by Centre for special assistance.

ಶ್ರೀ ಎಸ್. ಬಂಗಾರಪ್ಪ.—ಕೇಂದ್ರದ ಮಂತ್ರಿಯವರಾದ ಶ್ರೀಮಾನ್ ಕೆ. ಎಲ್. ರಾಯರ ಹೇಳಿಕೆಯ ಪ್ರಕಾರ ರಾಜ್ಯಸರ್ಕಾರದವರೇ ಈ ಮೂರು ಯೋಜನೆಗಳಿಗೆ ಹಣ ಒದಗಿಸಿಕೊಳ್ಳಬೇಕು ಕೇಂದ್ರ ಸರ್ಕಾರ ಹಣ ಕೊಡತಕ್ಕ ಪರಿಸ್ಥಿತಿ ಇಲ್ಲ ಎಂದು ಕೇಳಿರುವುದು ನಿಜವೇ ?

ಶ್ರೀ ಎಚ್. ಎನ್. ನಂಜೇಗೌಡ —ವರದಿಯ ಪ್ರಕಾರ ಆ ರೀತಿ ಹೇಳಿದ ಹಾಗೆ ಕಾಣುವುದಿಲ್ಲ. ಸರ್ಕಾರಕ್ಕೆ ಸಾಕಷ್ಟು ಹಣ ಖರ್ಚು ಮಾಡುವ ಶಕ್ತಿ ಇಲ್ಲದಿರುವುದರಿಂದ ಕಡಿಮೆ ಖರ್ಚು ಮಾಡಿದ್ದಾರೆಂದು ಹೇಳಿದ ಹಾಗೆ ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಒಂದು ವೇಳೆ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರದವರು ನಿರೀಕ್ಷಿಸಿದಷ್ಟು ಹಣ ಸಿಗದಿದ್ದರೆ ರಾಜ್ಯಸರ್ಕಾರದವರೇ ಈ ಮೂರು ಯೋಜನೆಗಳನ್ನು ಸಂಪೂರ್ಣಗೊಳಿಸುವುದಕ್ಕೆ ಯಾವ ಯೋಜನೆಯನ್ನು ಹಾಕಿಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಕೇಂದ್ರಸರ್ಕಾರದವರು ಇದಕ್ಕೆ ಹಣ ಕೊಡುತ್ತಾರೆ ಎನ್ನುವ ನೀರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇನ್ನು ಅದರ ಬಗ್ಗೆ ಉತ್ತರ ಬಂದಿಲ್ಲ. ಹಾಗೆ ಬಾರದಿದ್ದರೆ, ಮೂರು ಯೋಜನೆಗಳಿಗೆ ಬಜೆಟಿನಲ್ಲಿ 11 ಕೋಟಿ ರೂಪಾಯಿ ಒದಗಿಸಿದ್ದರೂ ಕೂಡ ಸುಮಾರು 19 ಕೋಟಿ ರೂಪಾಯಿ ಚಿಲ್ಲರೆ ಖರ್ಚು ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡು ಖರ್ಚು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದರ ಅರ್ಥ ಇದನ್ನು ಬೇಗ ಮುಗಿಸಬೇಕೆನ್ನತಕ್ಕಂತಹ ಕಳಕಳಿ ಸರ್ಕಾರಕ್ಕೆ ಇದ್ದೇ ಇದೆ.

ಶ್ರೀ ಎಸ್. ಬಂಗಾರಪ್ಪ.—ಈ ಯೋಜನೆಗಳ ಬರಗಾಲಕ್ಕೆ ತುತ್ತಾಗುವಂತಹ ಧಾರವಾರ, ಬಿಜಾಪುರ, ಮತ್ತು ಬೆಳಗಾಂ ಜಿಲ್ಲೆಗಳಿಗೆ ಅನುಕೂಲವಾಗುವುದರಿಂದ, ಈ ವಿಷಯವನ್ನು ಆಧಾರವಾಗಿಟ್ಟುಕೊಂಡು ಒತ್ತಾಯ ಮಾಡಿ ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಈ ವಿಷಯದಲ್ಲಿ ನಾವು ಕೇಂದ್ರದ ಸ್ಟಡಿ ಟೀಮ್ ಇಲ್ಲಿಗೆ ಬಂದಾಗ ಅವರ ಜೊತೆಯಲ್ಲಿ ನಮ್ಮ ಅಧಿಕಾರಿಗಳು ಮಾತನಾಡಿದ್ದಾರೆ. ಆ ಮೇಲೆ ನಾನು ಮತ್ತು ಅಧಿಕಾರಿಗಳು ಕೇಂದ್ರದಲ್ಲಿಯೂ ಮಾತನಾಡಿದ್ದೇವೆ. ಆಗ ನಮ್ಮ ವ್ಯವಸಾಯ ಮಂತ್ರಿಯವರೂ ಇದ್ದರು. ಆ ಸಮಯದಲ್ಲಿ ವಿಚಾರವನ್ನು ನಾವು ಕೇಂದ್ರದ ಯೋಜನಾ ಮಂತ್ರಿಯವರಿಗೆ ಮನದಟ್ಟಾಗುವಂತೆ ಹೇಳಿದ್ದೇವೆ. ಅಲ್ಲದೆ ನಾವು ಏನು ಇವತ್ತು ಪೈಪ್ಡ್ ಕಾಟನ್ ಮತ್ತು ಆಯಿಲ್ ಸೀಡ್ಸ್‌ನ್ನು ಅವಲಂಬ ಮಾಡಿಕೊಳ್ಳುತ್ತಿದ್ದೇವೆ ಅದನ್ನು ಸಹ ತಪ್ಪಿಸಲು ಈ ಯೋಜನೆಗಳನ್ನು ಕಾರ್ಯಗತ ಮಾಡುವುದರಿಂದ ಸಾಧ್ಯವಿದೆ ಎಂದು ಹೇಳಿದ್ದೇವೆ. ಅಲ್ಲದೆ ನಮ್ಮಲ್ಲಿ ಈ ಕ್ಷಾಮ ಡಾವರಗಳಿಗೆ ತುತ್ತಾಗುವಂತಹ ಪ್ರದೇಶಗಳು ಏನೆವೆ ಅವುಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಇದಕ್ಕೆ ವಿಶೇಷವಾದ ರಿಯಾಯಿತಿಯನ್ನು ತೋರಿಸಿ ನೆರವು ನೀಡಬೇಕೆಂದು ಕೇಳಿಕೊಂಡಿದ್ದೇವೆ. ನಾವು ಮಾಡಿದಂತಹ ಚರ್ಚೆಯ ಸಮಯದಲ್ಲಿ ಯೋಜನಾ ಮಂಡಳಿಯ ಇತರ ಸದಸ್ಯರೂ ಭಾಗವಹಿಸಿದ್ದರು ನಮ್ಮ ರಾಜ್ಯದ ವ್ಯವಸಾಯ ಮಂತ್ರಿಗಳೂ ಇದ್ದರು ಇಷ್ಟೆಲ್ಲಾ ನಾವು ಹೇಳಿದುದರಿಂದ ಯೋಜನಾ ಮಂತ್ರಿಯವರಿಗೆ ಇದರ ಮಹತ್ವ ಮನವರಿಕೆಯಾಗಿದೆ ಎಂಬುದು ಅವರು ವ್ಯಕ್ತಪಡಿಸಿದ ಕಳಕಳಿಯಿಂದ ಗೊತ್ತಾಗಿದೆ.

Constitution of the State Relief Commi tee

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕರೆ) —ನಿನ್ನೆ ನಾವು ಇಲ್ಲಿ ಬರಗಾಲ ಪೀಡಿತ ಪ್ರದೇಶಕ್ಕೆ ಸಹಾಯ ಮಾಲು ನಿರ್ಮಿತವಾದ ಒಂದು ಸ್ಟೇಟ್ ರಿಲೀಫ್ ಕಮಿಟಿಯ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಅದರ ಬಗ್ಗೆ ಇವತ್ತು ನಮಗೆ ಬಂದ ವರ್ತಮಾನದ ಪ್ರಕಾರ ಆ ಕಮಿಟಿಯವರು ಟೋಡೆಯವರ ಕಂಪೆನಿಯಿಂದ 20 ಲಕ್ಷ ರೂಪಾಯಿ ಮತ್ತು ಸುಧಾ ಅಂಡ್ ಕಂಪೆನಿಯಿಂದ 10 ಲಕ್ಷ ರೂಪಾಯಿ ಹೀಗೆ ಹಣ ಸಂಗ್ರಹಣೆ ಮಾಡಿದ್ದಾರೆಂದು ತಿಳಿದು ಬಂತು. ಇದರ ಬಗ್ಗೆ ಮಾನ್ಯ ಮಂತ್ರಿಯವರು ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ). —ತಾವು ನಿನ್ನೆ ಅವರ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ನಾಳೆ ಮಾಡುತ್ತೇನೆಂದು ಹೇಳಿದ್ದೀರಿ. ದಯವಿಟ್ಟು ಈಗ ಅದನ್ನು ಸಭೆಯ ಮುಂದೆ ಇಡಬೇಕು. ಒಂದು ವೇಳೆ ನೀವು ಇಡದೆ ಅನಾವಶ್ಯಕವಾಗಿ ಕಾಲ ಹರಣ ಮಾಡುವುದು ಬೇಡ. ಅದರ ಬಗ್ಗೆ ಮಾಹಿತಿ ಸಂಗ್ರಹಣೆ ಯಾಗಿದ್ದರೆ ಅದನ್ನು ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ). —ಮುಖ್ಯಮಂತ್ರಿಯವರು ದೆಹಲಿಯಲ್ಲಿದ್ದಾರೆ, ನೀವು ಇಲ್ಲಿ ಇದ್ದೀರಿ; ಬರಗಾಲ ಪ್ರದೇಶದಲ್ಲಿ ದನಕರುಗಳು ಮತ್ತು ಜನರು ಸಾಯುತ್ತಿದ್ದಾರೆ.

ಅಧ್ಯಕ್ಷರು. ನೀವು ಯಾವುದೋ ವಿಷಯಕ್ಕೆ ಹೋಗುತ್ತಿದ್ದೀರಲ್ಲ !

ಶ್ರೀ ವಾಟಾಳ್ ನಾಗರಾಜ.—ಇಲ್ಲ, ಇಲ್ಲ, ನಿನ್ನೆ ಮೈಸೂರು ಸ್ಟೇಟ್ ರಿಲೀಫ್ ಕಮಿಟಿಯ ಬಗ್ಗೆ ಹೇಳಿದ್ದೇವೆ. ಇದನ್ನು ನಾಳೆ ನಾಡಿದು ಎಂದು ತಳ್ಳತಕ್ಕ ಪ್ರಶ್ನೆ ಬೇಡ. ನಿಮ್ಮ ಮಾತು ಕೇಳಿ ಸಹನೆಯಿಂದ ಕೂತುಕೊಳ್ಳುವ ಕಾಲ ಹೋಯಿತು. ಆದ್ದರಿಂದ ನಮ್ಮ ಸಹನೆ ತಪ್ಪುವ ಮೊದಲು ಒಂದು ಸಮಾಧಾನಕರವಾದ ಉತ್ತರ ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾವು ಆ ಕಮಿಟಿಯಲ್ಲಿ ಯಾರ್ಯಾರು ಇರಕೂಡದು ಎಂದು ಹೇಳುತ್ತಿದ್ದೆವೋ, ಅವರೆಲ್ಲರೂ ಅದರಲ್ಲಿ ಇದ್ದಾರೆ

ಶ್ರೀ ವಾಟಾಳ್ ನಾಗರಾಜ್. —ನಿನ್ನೆ ಪರಿಷತ್ತಿನಲ್ಲಿ ಸಹ ಒಂದು ಹೇಳಿಕೆಯನ್ನು ಕೊಟ್ಟು ಡಾ. ನಟರಾಜ್, ಮತ್ತು ಕೆ. ಕೆ. ಮೂರ್ತಿಯವರ ಹೆಸರನ್ನು ಹೇಳಿದ್ದಾರೆ. ನಾವು ಯಾರ ಮೇಲೆ ದೋಷಾರೋಪಣೆಯನ್ನು ಹೊರಿಸಿದ್ದೇವೆಯೋ, ಅವರನ್ನೇ ಪುನಃ ನೀವು ಸದಸ್ಯರ್ ಮಾಡಿ ಕಮಿಟಿಯಲ್ಲಿ ಹಾಕಿರುವುದು ಯಾವ ನ್ಯಾಯ ?

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಈಗ ಮುಖ್ಯಮಂತ್ರಿಯವರ ಫೊಟೋ ನೋಡಿಕೊಂಡು ಅದು ಸರ್ಕಾರದ ವತಿಯಿಂದ ನೇಮಕವಾದ ಕಮಿಟಿ ಎಂದು ತಿಳಿದು ಕೆಲವರು ಧನ ಸಹಾಯವನ್ನು ಮಾಡಿದ್ದಾರೆ. ಆ ಮೇಲೆ ಇದು ನಿನ್ನೆ ಇಲ್ಲಿ ಚರ್ಚೆಯಾದ ಮೇಲೆ ಇದು ಸರ್ಕಾರದ ವತಿಯ ಕಮಿಟಿ ಅಲ್ಲವೆಂದು ತಿಳಿಯಿತು. ಮೈಸೂರಿನ ಕಲವು ಲೆಕ್ಚರರ್‌ಸ್ ಸಹ ಇದಕ್ಕೆ ಹಣವನ್ನು ಕಳಿಸಿದ್ದಾರೆ. ಈಗ ಅವರು ಸಹ ಇವರಲ್ಲಿ ಮೋಸ ಹೋಗಿದ್ದೇವೆ ಎಂದು ತಿಳಿದುಕೊಂಡಿದ್ದಾರೆ. ಆದ್ದರಿಂದ ಇದು ಒಂದು ಗೊಂದಲಮಯ ಪರಿಸ್ಥಿತಿಯನ್ನು ತಂದೊಡ್ಡಿದೆ. ಮುಖ್ಯಮಂತ್ರಿಯವರ ಫೋಟೊವನ್ನು ಹಾಕಿಕೊಂಡು ಖಾಸಗೀ ಸಂಸ್ಥೆಗಳು ಹಣ ಸಂಗ್ರಹಣೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಇದರಿಂದ ದೊಡ್ಡ ಅನಾಹುತವಾಗುತ್ತದೆ, ಇದರ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಈ ಕಮಿಟಿಯವರು ಕೆಲವರ ಹತ್ತಿರ ಹೋಗಿ ಮುಖ್ಯಮಂತ್ರಿಯವರ ಫೋಟೊ ಇದೆ ಎಂದು ಒತ್ತಾಯ ಮಾಡಿ ದುಡ್ಡು ಸಂಗ್ರಹಣೆ ಮಾಡಿದ್ದಾರೆಂದು ನನಗೆ ತಿಳಿದುಬಂದಿದೆ. ಆದ್ದರಿಂದ ಅದರ ಬಗ್ಗೆ ಸಮಂಜಸವಾದ ಉತ್ತರವನ್ನು ಕೊಡಬೇಕು.

†ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ನಿನ್ನೆಯ ದಿನದ ತಮ್ಮ ತೀವ್ರತೆಯನ್ನು ವ್ಯಕ್ತಪಡಿಸಿದ್ದಾರೆ. ಆಗ ನನ್ನ ಹತ್ತಿರ ಎಷ್ಟು ಮಾಹಿತಿ ಇತ್ತೋ ಅಷ್ಟನ್ನು ನಾನು ತಿಳಿಸಿದ್ದೇನೆ. ಇವತ್ತು ಹೆಚ್ಚಿನ ಮಾಹಿತಿಯನ್ನು ನಾನು ಪಡೆದು ಈ ಅಧಿವೇಶನದಲ್ಲೇ ಕೊಡುತ್ತೇನೆಂದು ನಾನು ಹೇಳಿದೆ. ಅದಕ್ಕೆ ಮಾನ್ಯ ಸದಸ್ಯರು ಜಾಗ್ರತೆ ಕೊಡಬೇಕೆಂದು ಕೇಳಿದಮೇಲೆ ನಾನು ನಾಳೆ ಶನಿವಾರ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ್ದೆ. ಅವರಂತೆ ಸರ್ಕಾರ ನಡೆದುಕೊಳ್ಳುತ್ತದೆ. ತಮಗೆ ಎಷ್ಟು ವಿವರಗಳುಬೇಕೋ ಸಾಧ್ಯವಾದ ಮಟ್ಟಿಗೆ ಎಲ್ಲಾ ವಿವರಗಳನ್ನೂ ಒಟ್ಟುಗೂಡಿಸಿಕೊಂಡು ನಾಳೆ ಶನಿವಾರ ನಿಮಗೆ ಕೊಡುತ್ತೇನೆ. ನಿಮಗೆ ಮರೆಮಾಚತಕ್ಕ ಯಾವ ಪರಿಸ್ಥಿತಿಯೂ ನನ್ನಲ್ಲಿಲ್ಲ. ಆ ಬಗ್ಗೆ ಮಾಹಿತಿಯನ್ನು ಕಲಕ್ಟ್ ಮಾಡಿ ಪ್ರತಿಯೊಂದು ಅಂಶವನ್ನೂ ಪಡೆದು ಶನಿವಾರ ಕೊಡುತ್ತೇನೆ ಎಂದು ನಾನು ಹೇಳಿದ್ದೇನೆ. ಆದ್ದರಿಂದ ನಾನು ಕೊಡುವುದಿಲ್ಲ ಎನ್ನತಕ್ಕಂಥಾದ್ದು ಇಂದಿಯೇ ಬಹುಮಂದಿ ಸದಸ್ಯರಿಗೆ ಏತಕ್ಕೆ ಬರಬೇಕು ? ಸಾರ್ವಜನಿಕ ಹಣ ಸದ್ವಿನಿಯೋಗವಾಗಬೇಕೆನ್ನುವುದರಲ್ಲಿ ಆ ಕಡೆಯ ಸದಸ್ಯರಿಗೆ ಎಷ್ಟು ತೀವ್ರತೆ ಇದೆಯೋ ಅಷ್ಟೇ ತೀವ್ರತೆ ಸರ್ಕಾರಕ್ಕೆ ಮತ್ತು ಈ ಕಡೆ ಇರತಕ್ಕವರೆಲ್ಲರಿಗೂ ಇದೆ. ವಿಷಯಗಳನ್ನು ತಮ್ಮ ಮುಂದೆ ಇಟ್ಟಮೇಲೆ ಅದರ ಬಗ್ಗೆ ತಾವು ತಮ್ಮ ಅಭಿಪ್ರಾಯಗಳನ್ನು ಹೇಳಬಹುದು. ಅದಕ್ಕೆ ನನ್ನ ಅಡ್ಡಿ ಇಲ್ಲ. ಆ ವಿಷಯಗಳನ್ನು ತಮ್ಮ ಮುಂದೆ ಇಡುವುದರ ಮೊದಲೇ ಎತ್ತು ಹಾರುವುದಕ್ಕೆ ಗೋಣಿ ಹಾರಿತು ಎನ್ನುವ ಹಾಗೆ

ವಿಷಯಗಳನ್ನು ನಂಗ್ರಹಣ್ ಮಾಡಿ ಕೊಡುವುದರ ಮೊದಲೇ ಆ ವಿಷಯಗಳನ್ನು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ಎಲ್ಲಾ ವಿಷಯಗಳನ್ನೂ ನಂಗ್ರಹಣ್ ಮಾಡುವುದಕ್ಕೆ ನಾನು ಈಗಾಗಲೇ ವಿಪ್ಪಾರ್ಡು ಮಾಡಿದ್ದೇನೆ. ಕೆಲವು ವಿಷಯಗಳು ನಂಗ್ರಹ ಮಾಡಿರುವುದು ಬಂದಿದೆ. ಇನ್ನು ಕೆಲವು ವಿಷಯಗಳು ಬಂದಿಲ್ಲ. ಇವೊತ್ತು ನಂಜೆ ಎಲ್ಲಾ ವಿಷಯಗಳೂ ಬರುತ್ತವೆ ತವ ಗೆ ನಾಳೆ ದಿವನ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ಮಾನ್ಯ ಮಂತ್ರಿಗಳು ನಮಗೂ ನಿಮ್ಮಷ್ಟೇ ಈ ಬಗ್ಗೆ ತೀವ್ರತೆ ಇದೆಯೆಂದು ಹೇಳಿದರು. ಅವರೂ ನಮ್ಮ ಸ್ಥಿತಿಗೆ ಬಂದರೆ ಸರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯದಲ್ಲಿ ನಿಮಗೆ ಎಷ್ಟು ತೀವ್ರತೆ ಇದೆಯೋ ಅದಕ್ಕಿಂತ ಹೆಚ್ಚಿಗೆ ತೀವ್ರತೆ ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಕೋಣಂದೂರುಲಿಂಗಪ್ಪ.—ಓರ್ವಾ ಅವರೂ ಕೂಡ ಅಭಾವ ಪರಿಹಾರ ಸಮಿತಿ ಎಂದು ಬಂದು ಬೋರ್ಡ್ ಹಾಕಿಕೊಂಡಿದ್ದಾರೆಂದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್.—ನೀವು ಒಳ್ಳೆ ಡೈನಾಮಿಕ್ ಇದ್ದಹಾಗೆ. ಇದು ನಿಮಗೆ ಗೊತ್ತಿಲ್ಲ ಎಂದರೆ ಹೇಗೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈಗಾಗಲೇ ಹೇಳಿದ್ದೇನೆ, ಎಲ್ಲಾ ವಿಷಯಗಳನ್ನು ಕರೆಕ್ಟ್ ಮಾಡಿ ನಾಳೆ ದಿವನ ಈ ಸಭೆಯ ಮುಂದೆ ಇಡುತ್ತೇನೆ ಎಂದು.

†ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಚನ್ನಬಸಪ್ಪನವರು ತಮ್ಮ ಅಸಹಾಯಕತೆಯನ್ನು ಈ ಸಭೆಯ ಮುಂದೆ ತೋಡಿಕೊಳ್ಳುತ್ತಾರೆ ಎಂದು ನಾನು ನಂಬಿರಲಿಲ್ಲ. ರೆವಿನ್ಯೂ ಸೆಕ್ರೆಟರಿಯವರಿಗೆ ಫೋನ್ ಮಾಡಿ ಎಮ್ಮೆಚ್ಚಿಗಿಂತಲೂ ಹೆಚ್ಚು ವೇಗದಲ್ಲಿ ಓಡುತ್ತೇನೆ ಎಂಬ ಆಭರಾಷೆಯಿಂದ ಅವರು ಈ ರಾಜ್ಯದಲ್ಲಿ ಎರಡನೇ ಸಾರಿ ಮಂತ್ರಿಗಳಾಗಿದ್ದಾರೆ ಮತ್ತು ಎಲ್ಲೆಲ್ಲಿ ಯಾರು ಯಾರು ಎಷ್ಟೆಷ್ಟು ಕರೆಕ್ಟ್ ಮಾಡುತ್ತಾರೆ ಎನ್ನುವುದನ್ನು ಈ ಸಭೆಗೆ ಒದಗಿಸಿ ಅದರ ಮೇಲೆ ಚರ್ಚೆ ಆದಮೇಲೆ ಅದಕ್ಕೆ ತಾವು ಒಂದು ಅಫಿಷಿಯಲ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕಾಗುತ್ತದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಈಗ ಈ ಕಮಿಟಿಯನ್ನು ಸರ್ಕಾರದವರು ಕಾನ್‌ಸ್ಟಿಟ್ಯೂಟ್ ಮಾಡಿದ್ದರೆ ಅದರಲ್ಲಿ ಯಾರು ಯಾರು ಇದ್ದಾರೆ ಎನ್ನುವ ವಿವರಣೆಯನ್ನು ಕೊಡಿ ಯಾರೋ ಖಾಸಗೀ ಸಮಿತಿಯವರು ಪ್ರಧಾನ ಮಂತ್ರಿಗಳ ಅಥವಾ ಮುಖ್ಯ ಮಂತ್ರಿಗಳ ಹೆಸರನ್ನು ಹಾಕಿಕೊಂಡರೆ ಅದು ತಪ್ಪಾಗುವುದಿಲ್ಲವೇ ? ತಾವು ಮಂಗಳೂರಿನಲ್ಲಿ ಹಿಂದೆ ಭಾಷಣ ಮಾಡಿದಾಗ ಪ್ರಧಾನಮಂತ್ರಿಗಳ ಹೆಸರನ್ನು ಯಾರೇ ಆಗಲೀ ಉಪಯೋಗಿಸುವುದು ಸರಿಯಲ್ಲ, ಅವರ ಹೆಸರನ್ನು ದುರುಪಯೋಗ ಮಾಡಿಕೊಳ್ಳತಕ್ಕದು ಸರಿಯಲ್ಲ, ಅವರ ಹೆಸರನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ನಾವು ಇಚ್ಛೆಪಡುವುದಿಲ್ಲ ಎಂದು ಹೇಳಿದ್ದೀರಿ. ಅದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪತ್ರಿಕೆಗಳಲ್ಲಿ ಬಂದಿದೆ. ಹೀಗಿರುವಾಗ ಒಂದು ಖಾಸಗೀ ಸಂಸ್ಥೆಯವರು ರಾಜ್ಯದ ಮುಖ್ಯ ಮಂತ್ರಿಗಳ ಫೋಟೋವನ್ನು ಹಾಕಿಕೊಂಡು ಅವರನ್ನು ದುರುಪಯೋಗ ಮಾಡಿಕೊಳ್ಳುವುದು ತಪ್ಪಾಗುತ್ತದೆ. ಆದ್ದರಿಂದ ಅದು ಸರ್ಕಾರದಿಂದ ನಿಯಮಿತವಾದ ಸಮಿತಿ ಹೌದೇ ಅಥವಾ ಅಲ್ಲವೇ ಇಷ್ಟೇ ನಮಗೆ ವಿವರಣೆ ಬೇಕು. ಇದನ್ನು 5 ನಿಮಿಷದಲ್ಲಿ ತಾವು ತರಿಸಿಕೊಳ್ಳಬಹುದು. 25 ವರ್ಷಗಳಿಂದ ರಾಜ್ಯ ಆಳಿದವರ ಪರಿಸ್ಥಿತಿ ಬೇರೆಯಾಗಿದೆ. ಈಗ 8 ತಿಂಗಳಿಂದ ಈಚೆಗೆ ದಿವನಕ್ಕೆ 5 ರೂಪಾಯಿ ವ್ಯವಹಾರ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವವರು ಇವೊತ್ತು ತಿಂಗಳಿಗೆ 500—600 ರೂಪಾಯಿಗಳ ಬಾಡಿಗೆ ಕೊಡುವಂತಹ ಸ್ಟೇಜ್‌ಗೆ ಬಂದಿದ್ದಾರೆ. ಅದು ಹಾಗಿರಲಿ. ಈಗ ಸ್ಟೇಟ್ ರಿಲೀಫ್ ಕಮಿಟಿ ಎಂದು ಏನಿದೆ ಅವರಿಗೆ ಯಾರಾದರೂ ಧಾನ್ಯ, ಹುಲ್ಲು ಇತ್ಯಾದಿ ಪದಾರ್ಥಗಳನ್ನು ಕೊಡುವುದಕ್ಕೆ ಹೋದರೆ ಅದು ಬೇಡಿ ಕ್ಯಾಷ್ ಕೊಡಿ ಎಂದು ಹೇಳುತ್ತಾರಂತೆ. ಅದಕ್ಕೋಸ್ಕರ ನಾನು ಮಾನ್ಯ ಉಪನಾಯಕರಾದ ಶ್ರೀ ಚನ್ನಬಸಪ್ಪನವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇವೊತ್ತು ಈ ಸಭೆಯಲ್ಲಿ ಅದು ಸರ್ಕಾರದಿಂದ ನಿಯಮಿತವಾದ ಸಮಿತಿ ಹೌದೇ ಅಥವಾ ಅಲ್ಲವೇ ಎಂಬುದನ್ನು ಮಾತ್ರ ಹೇಳಿ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತೇವೆ.

†ಶ್ರೀ ಎಂ. ಎಸ್. ಕೃಷ್ಣನ್.— ಈಗ ಶ್ರೀಮಾನ್ ದೇವೇಗೌಡರು ಸ್ಟೇಟ್ ರಿಲೀಫ್ ಕಮಿಟಿಯ ಬಗ್ಗೆ ವಿವರಣೆ ಕೊಡಬೇಕೆಂದು ಹೇಳಿದ್ದಾರೆ ಈಗ ಇರತಕ್ಕ ಸ್ಟೇಟ್ ರಿಲೀಫ್ ಕಮಿಟಿಯ ಜೊತೆಗೆ ಬೇರೆ ಅವರು ಒಂದು ಬೋರ್ಡ್ ಹಾಕಿಕೊಂಡು ಅದರಲ್ಲಿ ಸ್ಟೇರ್ಸಿಟಿ ರಿಲೀಫ್ ಕಮಿಟಿ ಎಂದು

(ಶ್ರೀ ಎಂ. ಎಸ್. ಕೃಷ್ಣನ್)

ಹಾಕಿಕೊಂಡಿದ್ದಾರೆ. ಬರ್ಗಾ ಅವರು ಎರೆಡು ಲಾರಿ ಹುಲ್ಲನ್ನು ಅಭಾವ ಪ್ರದೇಶಕ್ಕೆ ಕಳುಹಿಸಿ ಸರ್ಕಾರದಿಂದ ಬೇಕಾದಷ್ಟು ಅನುಕೂಲತೆಯನ್ನು ಪಡೆಯುತ್ತಿದ್ದಾರೆಂದು ನಮಗೆ ತಿಳಿದು ಬಂದಿದೆ. ಈ ರೀತಿ ಸ್ವಲ್ಪ ಸಹಾಯ ಮಾಡಿ, ಸರ್ಕಾರದಿಂದ ಬೇರೆ ರೀತಿಯಿಂದ ಬರ್ಗಾ ಅವರು ಸಹಾಯ ಪಡೆಯುತ್ತಿದ್ದಾರೆ. ಅವರು ಈಗಾಗಲೇ ಹರಿಹರದ ಹತ್ತಿರ ಜಮೀನು ಪಡೆದುಕೊಂಡು ಕಾರ್ಖಾನೆ ಪ್ರಾರಂಭ ಮಾಡಿದ್ದಾರೆ. ಮತ್ತೆ ಈಗ ಅಮ್ಮಸಂದ್ರದ ಹತ್ತಿರ 300 ಎಕರೆ ಜಮೀನನ್ನು ಅವರಿಗೆ ಮಂಜೂರು ಮಾಡಿದ್ದೀರಿ. ಕೆಲವು ಮಂತ್ರಿಗಳು, ಕೆಲವು ಅಧಿಕಾರಿಗಳು ಅವರ ಜೊತೆಯಲ್ಲಿ ಯಾವಾಗಲೂ ಅಶೋಕಾ ಹೋಟೇಲ್‌ನಲ್ಲೇ ಪಾರ್ಟಿಯಲ್ಲಿ ಬಿದ್ದಿರುತ್ತಾರೆಂದು ತಿಳಿದು ಬಂದಿದೆ. ಅವರು ಆಗಾಗ್ಗೆ ವಿಧಾನಸೌಧದಲ್ಲಿಯೂ ಕೆಲವು ಫಂಗ್‌ಷನ್‌ಗಳನ್ನು ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ.

2-30 P.M.

ಶ್ರೀ ವಾಟಾಳ್ ನಾಗರಾಜ್.—ಇವರ ಕಾರ್ಯಾಲಯ ದೊಡ್ಡ ಕಂಟ್ರಾಕ್ಟರ್ ಆದ ಚಾವು ರಾಜು ಅವರ ಕೊಠಡಿಯಲ್ಲಿ ಇದೆ. ಅಶೋಕ ಹೋಟೇರ್‌ನಲ್ಲಿ ಇವರು ಮೊದಲ ಸಭೆ ನಡೆಸಿದರು ಎಂದಮೇಲೆ, ಇವರಿಗೆ ಬೆಡಬಗ್ಗರ ಮೇಲೆ ಎಷ್ಟರ ವಿಶ್ವಾಸವಿದೆ ಎಂಬುದು ಗೊತ್ತಾಗುತ್ತದೆ. ಇದರ ಬಗ್ಗೆ ಸಂಪೂರ್ಣ ವಿವರಗಳನ್ನು ತಾವು ತರಿಸಿಕೊಡಬೇಕು. ಇಲ್ಲದಿದ್ದರೆ ತಮ್ಮಲ್ಲಿರುವ ನಂಬಿಕೆ ನಮಗೆ ಹೊರಟು ಹೋಗುತ್ತದೆ. 5 ನಿಮಿಷಗಳಲ್ಲಿ ವಿವರ ತರಿಸಬಹುದಾಗಿತ್ತು. ಆದರೆ ಅದಕ್ಕೆ ಏನೋ ತಡೆ ಇರುವಂತೆ ಕಾಣುತ್ತಿದೆ. ತಮ್ಮ ಮಂತ್ರಿ ಪದವಿ ಹೋದರೂ ಸರಿಯೆ, ಅದರ ಸರಿಯಾದ ವಿವರಗಳನ್ನು ತರಿಸಿ ಸಭೆಗೆ ತಿಳಿಸಬೇಕು

ಶ್ರೀ ಎಚ್. ಎಸ್. ಸಿದ್ದಪ್ಪ.—ಮೊದಲ ಸಭೆ ನಡೆಸಿದ್ದಕ್ಕೆ ಖರ್ಚು ಎಷ್ಟಾಯಿತು ?

ಅಧ್ಯಕ್ಷರು.—ಯಾರನ್ನು ಕೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ಚನ್ನಬಸಪ್ಪನವರಿಂದ ಕೇಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಬಗ್ಗೆ ಪತ್ರಿಕೆಯಲ್ಲಿ ಫೋಟೋ ಬಂದಿದೆ. ಆ ಫೋಟೋ ಮನ್ನೇ ಕೇಳುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಎಲ್ಲ ವಿಷಯಗಳು ಗೊತ್ತಿದ್ದರೂ ಸಹ, ಅವರು ನನ್ನ ಹತ್ತಿರ ಯಾವ ವಿಷಯ ತಿಳಿಯಬೇಕೆಂದಿದ್ದಾರೋ ಗೊತ್ತಾಗುತ್ತಿಲ್ಲ. ಅಪೂರ್ಣವಾದ ವಿವರಗಳನ್ನು ಕೊಡುವುದಕ್ಕೆ ನನಗೆ ಇಷ್ಟವಿಲ್ಲ, ಎಲ್ಲ ವಿವರಗಳನ್ನು ಸಂಗ್ರಹಿಸಿ ಸಭೆಗೆ ತಿಳಿಸುತ್ತೇನೆಂದು ನಾನು ನೆನ್ನೆ ದಿವಸವೇ ಹೇಳಿದ್ದೇನೆ. ಈಗತಾನೆ ಮಾನ್ಯ ಕೃಷ್ಣನ್ ಅವರು ಬರ್ಗಾ ಸ್ಕೇರ್ಸಿಟಿ ಕೌನ್ಸಿಲ್ ವಿಚಾರ ಹೇಳಿದರು. ಅವರ ಬಗ್ಗೆಯೂ ಸಹ ಏನಾದರು ವಿವರಗಳು ಸಿಕ್ಕಿದರೆ ಸಂಗ್ರಹಿಸಿ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅದೇ ಮಾರ್ಗದಲ್ಲಿ ತಾವು ದಿನವೂ ಕಾರಿನಲ್ಲಿ ಓಡಾಡುತ್ತೀರಿ, ಆ ಬೋರ್ಡ್ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿದ್ರೆ ಮಾಡಲು 7-8 ಗಂಟೆಗಳನ್ನು ಬಿಟ್ಟರೆ ಉಳಿದ ಸಮಯದಲ್ಲಿ ಕರೆಮಾಡಿಕೊಳ್ಳುವುದಕ್ಕೆ ಸಮಯ ಇಲ್ಲದಷ್ಟು ಕೆಲಸವಿರುವಾಗ, ಎಲ್ಲಿ ಯಾವ ಬೋರ್ಡ್ ಇದೆ ಎಂದು ನೋಡುವುದಕ್ಕೆ ಸಮಯ ಎಲ್ಲಿ ಸಿಕ್ಕಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಭಾರಿ ಸರ್ಕಾರಿ ಯೋಜನೆಗಳ ಕೆಲಸ ಮತ್ತು ಇತರೆ ಕಾಮಗಾರಿಗಳ ಕೆಲಸ ಮಾಡಿ ಅನುಭವ ಇರುವುದರಿಂದ ಹೆಚ್ಚಿನ ಕೆಲಸವೇನು ಇರಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈಗಲೂ ಕೆಲಸ ಇದೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಚ್. ಎನ್. ನಂಜೇಗೌಡ.—ತಮ್ಮ ಸರ್ಕಾರದವರು ಮಾಡಿದ ಕರ್ಮಕಾಂಡವನ್ನೆಲ್ಲಾ ತೊಳೆಯಬೇಕಾಗಿಸೆಯಲ್ಲ ;

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಹೆಚ್ಚಿನ ಕೆಲಸವಿರುವುದರಿಂದ, ಆ ಬೋರ್ಡನ್ನು ನೋಡುವ ಯೋಗ ಸಿಕ್ಕಿಲ್ಲ. ಒಟ್ಟಿನಲ್ಲಿ ನಾನು ನೆನ್ನೆ ದಿವಸ ಸಭೆಗೆ ಏನು ವಾಗ್ದಾನ ಮಾಡಿ

ದ್ದೇನೆ, ಅದರಂತೆ ಎಲ್ಲ ವಿವರಗಳನ್ನು ತರಿಸಿ, ನಾಳೆ ದಿವಸ ಸಭೆಗೆ ತಿಳಿಸುತ್ತೇನೆ. ಇಷ್ಟು ಭರವಸೆ ತಮಗೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ದೇವೇಗೌಡರು ಕೇಳಿದಂತೆ, ಅದು ಸರ್ಕಾರದ ಸಮಿತಿ ಹೌದೇ ಅಥವಾ ಅಲ್ಲವೇ ಎಂಬುದನ್ನು ಹೇಳಲಿ.

ಶ್ರೀ ಎಚ್. ಡಿ. ದೇವೇಗೌಡ.—ಆ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರಿಗೇ ಬಿಡುತ್ತೇನೆ. ನೀವೇ ತೀರ್ಮಾನ ಮಾಡಿ. ಅದು ಸರ್ಕಾರದ ಸಮಿತಿಯೇ ಅಥವಾ ಅಲ್ಲವೇ ಎಂಬುದಕ್ಕೆ 5 ನಿಮಿಷದಲ್ಲಿ ವಿವರ ತರಿಸಿ ಹೇಳಬಹುದು. ಅದರಲ್ಲಿ ಏನು ಕಷ್ಟವಿದೆ. ಅಷ್ಟೂ ಸಹ ಹೇಳುವುದಕ್ಕಾಗುವುದಿಲ್ಲ ವೆಂದರೆ, ಸರ್ಕಾರದವರು ತಲೆ ತಗ್ಗಿಸಬೇಕು.

† ಶ್ರೀ ಬಿ ಪುಟ್ಟಸ್ವಾಮಯ್ಯ (ರಾಮನಗರಂ).—ಈ ವಿಚಾರವನ್ನು ನೋಡಿದಾಗ, ಹೆತ್ತ ತಾಯಿ ಮಗು ತಿಂದಳು ಎಂದು ಹೇಳಿದ ಹಾಗೆ ಇದೆ. ಬರಗಾಲ ಪೀಡಿತ ಪ್ರದೇಶದ ಜನರಿಗೆ ಸಹಾಯ ಮಾಡಿದರೆ, ಅದನ್ನು ವಿರೋಧ ಪಕ್ಷದವರು ಏತಕ್ಕೆ ಕೇಳುತ್ತಾರೆ ಎಂಬ ಭಾವನೆ ಆತಂಕಿತ ಪ್ರದೇಶದವರಿಗೆ ಬಂದಂತೆ ಕಾಣುತ್ತಿದೆ. ಮಗುವನ್ನು ಹೆತ್ತ ತಾಯಿಯೇ ಗಬ ಗಬ ತಿಂದ ಹಾಗೆ ಈ ವಿಷಯ ಸರ್ಕಾರದವರಿಗೆ ಕಾಣುತ್ತಿರುವಂತೆ ಗೊತ್ತಾಗುತ್ತಿದೆ. ಆ ಒಂದು ಸಮಿತಿ ಸರ್ಕಾರದ್ದೇ ಅಥವಾ ಅಲ್ಲವೇ ಎಂದು ಹೇಳುವುದಕ್ಕಾಗದಿದ್ದರೆ, ಅವರನ್ನು ಹೇಗೆ ನೋಡಿಕೊಂಡು ನಾವು ಇಲ್ಲಿ ಕುಳಿತುಕೊಳ್ಳಬೇಕು. ಅದು ಸರ್ಕಾರದ್ದು ಅಲ್ಲ ಎಂದು ಹೇಳಲಿ, ಇಲ್ಲದಿದ್ದರೆ ವಿೀಕೆಯು ಮೇಲೆ ಕೈಹಾಕಿ ನಮ್ಮದು ಎಂದು ಹೇಳಲಿ. ಆ ರೀತಿ ಏನನ್ನೂ ಹೇಳದಿದ್ದರೆ ನಾನು ಮುನುಕು ಹಾಕಿ ಕೊಂಡು ಹೊಂಗೆ ಹೊರಟು ಹೋಗುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ಸರ್ಕಾರದ್ದು ಹೌದೇ ಅಥವಾ ಅಲ್ಲವೇ ಎಂಬುದನ್ನು 5 ನಿಮಿಷದಲ್ಲಿ ತಿಳಿದು ಕೊಂಡು ಹೇಳಬಹುದು. ಅದು ಸರ್ಕಾರದ್ದು ಅಲ್ಲದಿದ್ದರೆ, ಆ ರೀತಿ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಚಿತ್ರದಲ್ಲಿ ಮುಖ್ಯಮಂತ್ರಿಗಳು ಸಹ ಇದ್ದಾರೆ. ಆದ್ದರಿಂದ ಅದು ಸರ್ಕಾರದ ಸಮಿತಿಯೇ ಅಥವಾ ಅಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ಶರಣಪ್ಪ.—ಸರ್ಕಾರದವರು ಯಾವ ಕೌನ್ಸಿರ್‌ನ್ನೂ ನೇಮಕ ಮಾಡಿಲ್ಲ ಎಂದು ಕಾಣುತ್ತದೆ.

ಅಧ್ಯಕ್ಷರು.—ಅದರ ವಿವರಗಳನ್ನು ನಾಳೆ ದಿವಸ ಹೇಳುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ವಿವರಗಳೆಲ್ಲಾ ಇಂದೇ ಸಿಕ್ಕಿದರೆ ಸಾಯಂಕಾಲವೇ ವಿವರ ಕೊಡಬಹುದು.

ಶ್ರೀ ವಾಟಾಳ್ ನಾಗರಾಜ್.—ವಿವರಗಳನ್ನು ನಾಳೆ ಕೊಡಲಿ. ಆದರೆ ಆ ಸಮಿತಿ ಸರ್ಕಾರದ್ದು ಹೌದೇ ಅಥವಾ ಅಲ್ಲವೇ ಎಂಬುದನ್ನು ಈಗ ಹೇಳಲಿ.

Sri H. M. CHANNABASAPPA.—I rise to a point of order Madam Speaker. The Hon. Leader of the Opposition and some other Hon. Members asked for certain information yesterday. I had promised that I would submit the information to the House either today or tomorrow. I would reiterate that the information will be made available to the House tomorrow. The House was satisfied with the answer that it would get the information either today or tomorrow and inspite of it, this kind of presurising attitude would it be fair ? I have made it crystal clear that information will be furnished to the House tomorrow. If the information is available to me early, I shall be too glad to furnish it to the House. I don ot know why the Hon. Members are pressurising me to furnish the information when it is not readily available with me. Therefore I woull like to submit that the House has agreed to the statement which I made that I would furnish it today or tomorrow and to go back on that will not be in order. I would therefore submit that it would not be in order to allow further discussion on this matter.

Madam SPEAKER.—I agree with the Hon. Minister's point of order.

ಶ್ರೀ ಪಾಟಾಳ್ ನಾಗರಾಜ್.—ಈ ಸಂಸ್ಥೆ ಸರಕಾರದ್ದೇ ಅಲ್ಲವೇ ಎನ್ನುವುದನ್ನು ಮಾತ್ರ ಇಲ್ಲಿ ಸರಕಾರ ಒಂದು ಶಬ್ದ ಹೇಳಿದರೆ ಸಾಕು.

ಅಧ್ಯಕ್ಷರು.—ಇದರ ಎಲ್ಲ ಉತ್ತರವನ್ನು ನಾಳೆ ಕೊಡುತ್ತಾರೆ. ಅಲ್ಲಿಯವರೆಗೆ ತಾವು ಸ್ವಲ್ಪ ಅವಕಾಶ ಕೊಡಿ.

ಶ್ರೀವಿ. ಎನ್ ಪಾಟೀಲ್.—ಇದರ ಬಗ್ಗೆ ಮಂತ್ರಿಗಳು ನಾಳೆ ಉತ್ತರ ಕೊಡಲಿ. ಇದರ ಬಗ್ಗೆ ಒಂದು ಸಲಹೆ ನಾನು ಹೇಳಬಹುದು, ಈ ಸಂಸ್ಥೆ ಸರಕಾರದ್ದಾಗಿದ್ದರೆ ಅದರಲ್ಲಿ ಮುಖ್ಯಮಂತ್ರಿಗಳ ಫೋಟೋ ಹಾಕಿಸಲಿ. ಹಾಗಿಲ್ಲದೇ ಇದ್ದರೆ ಇದರಲ್ಲಿ ಮುಖ್ಯಮಂತ್ರಿಗಳ ಫೋಟೋ ಹಾಕುವ ಬೇಡ ಎನ್ನುವ ವಿಚಾರವನ್ನೂ ಗಮನದಲ್ಲಿಟ್ಟು ಉತ್ತರ ಕೊಡಲಿ.

Collection of levy paddy in the Malnad Areas

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆ ತಮ್ಮ ಅಪ್ಪಣೆ ಕೇಳಿದ್ದೆ. ಅದು ನಮ್ಮ ಮಲೆನಾಡಿನಲ್ಲಿ ಎಲ್ಲ ಕಡೆಗಳಲ್ಲೂ ಲೆವಿ ಭತ್ತ ವಸೂಲು ಮಾಡುತ್ತಿರುವುದರ ಬಗ್ಗೆ.

ಅಧ್ಯಕ್ಷರು.—ಇದನ್ನು ಸರಕಾರದ ಕಡೆಗೆ ಕಳುಹಿಸಲಾಗಿದೆ. ಇಂದು ಮಾನ್ಯ ಮಂತ್ರಿಗಳೂ ಬಂದಿಲ್ಲ. ಅವರು ಬಂದ ನಂತರ ಇದರ ಉತ್ತರ ಆಮೇಲೆ ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಅಲ್ಪಕಾಲಾವಧಿ ಪ್ರಶ್ನೆ ಹಾಗೂ ಕಾಲಿಂಗ್ ಅಟೆನ್‌ಷನ್ ಕಳುಹಿಸಿ 8—10 ದಿನಗಳಾದರೂ ಇದರ ಬಗ್ಗೆ ಇಲ್ಲಿ ಸರಕಾರ ಏನೂ ಏಕೆ ಪ್ರಸ್ತಾಪ ಮಾಡುತ್ತಿಲ್ಲ? ಇದನ್ನು ಸರಕಾರದ ಕಡೆಯಿಂದ ತಾವು ತರಿಸಿಕೊಡಬೇಕು.

ಅಧ್ಯಕ್ಷರು.—ಸರಕಾರದಿಂದ ಉತ್ತರ ಬಂದಿಲ್ಲ. ಅದು ಬಂದ ನಂತರ ಇಲ್ಲಿ ತೆಗೆದು ಕೊಳ್ಳೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರ ಬರಲಿಲ್ಲ ಎಂದರೆ ನಮ್ಮ ಮಲೆನಾಡಿನ ಬಹು ಜ್ವಲಂತವಾದ ಪ್ರಶ್ನೆಗಳನ್ನೂ ಕಳುಹಿಸಿದರೂ ಸರಕಾರದ ಕಡೆಯಿಂದ ಉತ್ತರ ಬಾರದೇ ಹೋದರೆ ಏನು ಮಾಡುವುದು? ನಮ್ಮ ಮಲೆನಾಡಿನಲ್ಲಿ ಕಟ್ಟಿಗೆ ಸಮಸ್ಯೆ ಬಹುವಾಗಿ ದಿನೇ ದಿನೇ ಹೆಚ್ಚಾಗುತ್ತಿದೆ. ಇದು ನಮ್ಮ ಭಾಗದ ಜನರ ಸಾವು ಬದುಕಿನ ಸಮಸ್ಯೆ. ಇದರ ಬಗ್ಗೆ ಸರಕಾರ ಏಕೆ ಇನ್ನೂ ಉತ್ತರ ಕೊಡುತ್ತಿಲ್ಲ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು 312ರ ನಿಯಮದ ಪ್ರಕಾರ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಿಜಾಪುರ ಜಿಲ್ಲೆಯಲ್ಲಿರುವ ಒಂದು ಕೆರೆಯ ಬಗ್ಗೆ ಎಂದರೆ ಮುದ್ದೇಬಿಹಾಳಿನ ಮಡಕೇಶ್ವರ ಕೆರೆ ಬಗ್ಗೆ ವಿವರಗಳನ್ನು ಕೇಳಿದ್ದೆ. ಇದರ ಬಗ್ಗೆ ಇಂದು ಇಲ್ಲಿ ಪ್ರಸ್ತಾಪ ಮಾಡು ಎಂದರೆ ಮಾಡುತ್ತೇನೆ. ಇಲ್ಲವೇ ವಿವರಗಳನ್ನ ಸಂಗ್ರಹಣೆ ಮಾಡಿದ ಮೇಲೆ ತೆಗೆದು ಕೊಳ್ಳಬೇಕೆಂದು ಅಧ್ಯಕ್ಷರು ಹೇಳಿದರೆ ಹಾಗೇ ಮಾಡಬಹುದು.

ಅಧ್ಯಕ್ಷರು.—ಇದನ್ನು ನಾಳೆ ತೆಗೆದುಕೊಳ್ಳಬಹುದು.

Mysore Land Reforms Amendment) Bill, 1972

Motion to consider

(Debate Contd.)

† ಶ್ರೀ ಎಸ್. ಮೈ. ಪಾಟೀಲ್ (ಸಿಂದಗಿ).—ಮಾನ್ಯ ಅಧ್ಯಕ್ಷರೇ, ರ್ಯಾಂಡು ರಿಫಾರಂಸ್ ಅಮೆಂಡುಮೆಂಟ್ ಬಿಲ್ಲಿನ ಮೇಲೆ ಕೆಲವು ದಿನಗಳಿಂದ ಇಲ್ಲಿ ಚರ್ಚೆಯಾಗುತ್ತಿದೆ, ಈ ಚರ್ಚೆಯನ್ನು ನೋಡಿದರೆ ಸಾಧಾರಣವಾಗಿ ಈ ಭೂಮಿ ವಿಷಯವಾಗಿ ಯಾವುದೋ ಕೆಲವು ವಿಚಾರಗಳನ್ನು